Reg no KRNN 12 - For Influential Publicity - 14-9-76

ಷ್ಟಿ ಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೇರವೇರಿಸಲಿರುವ ಏಕೈ

ಸತ್ಯವಾದಿ
SATYAVADI

60th Diamond Jubilee Year
ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸಂಸ್ಥಾಪಕರು : ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 15 ಪೈಸೆ

ಈಶ್ವರ ಪ್ರತ್ಯಕ್ಷನಾಗದಿದ್ದಕ್ಕೆ

ದಾವಣಗೆರೆ— ಅನೇಕ ವರ್ಷಗಳಿಂದ ತಾನು ಪೂಜಿಸುತ್ತಿದ್ದರೂ ಈಶ್ವರ ದೇವರು ಪ್ರತ್ಯಕ್ಷನಾಗಲಿಲ್ಲವೆಂದು, ಜಂಬಣ್ಣನಗರದ ಒಬ್ಬ ಯುವಕನು ಚಾಕು ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿ ಆಸ್ಪತ್ರೆಗೆ ಹೋಗಬೇಕಾಯಿತು.

★

ಅಲ್ಲೂ ಮೃತ್ಯು

ಕೊಥಗುಂಟೆಯಲ್ಲಿ ಒಬ್ಬ ಹುಡುಗಿ ಒಂದು ಸೇಬಿನಹಣ್ಣು ಹಿಡಿದುಕೊಂಡು ತನ್ನ ತಾಯಿಯ ಜೊತೆಯಲ್ಲಿ ಬಸ್ಸಿಗೆ ಕಾಯುತ್ತಾ ಬಸ್ ಸ್ಟಾಪ್ ಹತ್ತಿರ ನಿಂತಿದ್ದಳು – ಆಗ ಸೇಬಿನಹಣ್ಣು ಕೈಯಿಂದ ಜಾರಿ ರಸ್ತೆಗೆ ಬಿದ್ದು ಅಚಿಕಡೆಗೆ ಉರುಳುತ್ತಾ ಹೋಯಿತು – ಹಣ್ಣು ತೆಗೆದುಕೊಳ್ಳಲು ಹಡುಗಿ ರಸ್ತೆಗೆ ಹೋದಾಗ ವೇಗವಾಗಿ ಬಂದ ಬಸ್ಸು ಇವಳ ಮೇಲೆ ಹರಿದು ಮೃತಪಟ್ಟಳು.

★

ಸಂತಾಪ ಪುಸ್ತಕದಲ್ಲಿ ಸಹಿ

ನವದೆಹಲಿ— ಪ್ರಧಾನಿ ಇಂದಿರಾರವರು ಚೀನಾ ರಾಯಭಾರಿಕಚೇರಿಗೆ ಹೋಗಿ, ಮಾವೋರ ನಿಧನಕ್ಕೆ ಸಂತಾಪ ಪುಸ್ತಕದಲ್ಲಿ ಹಿಂದಿ ಮತ್ತು ಇಂಗ್ಲೀಷಿನಲ್ಲಿ ಸಹಿಮಾಡಿದರು.

★

ತುರ್ತು ಪರಿಸ್ಥಿತಿ ನಿರರ್ಥಕ

ಕೊಲಂಬೊ— ಶ್ರೀಲಂಕಾದಲ್ಲಿ ಅಧ್ಯಕ್ಷ ಗೋಪಾಲವಾ ರವರು ಘೋಷಿಸಿರುವ ತುರ್ತು ಪರಿಸ್ಥಿತಿ ನ್ಯಾಯಸಮರ್ಥವಲ್ಲವೆಂದುವಿಶೇಷ ನ್ಯಾಯಾಸ್ಥಾನ ಮಾಡಿರುವ ತೀರ್ಪಿನ ವಿರುದ್ಧ ಸರಕಾರ ಸುಪ್ರೀಂ ಕೋರ್ಟಿನಲ್ಲಿ ಅಪೀಲು ಮಾಡಲು ನಿರ್ಧರಿಸಿದೆ

○

ಎಣ್ಣೆ ಹೊಂದಿರುವ ಪರಿಮಿತಿ

ಮದರಾಸು— ರಾಜ್ಯದಲ್ಲಿಯ ಎಣ್ಣೆ ಉತ್ಪಾದಕರು ಮತ್ತು ವ್ಯಾಪಾರಿಗಳೂ ಕಡಲೆಕಾಯಿಎಣ್ಣೆ ಹೊಂದಬಹುದಾದ ಪರಿಮಿತಿಯನ್ನು ತಮಿಳುನಾಡು ಸರಕಾರ ವಿಧಿಸಿದೆ.

●

ಜನತಾ ಬೀರೆ ಧೋತ್ರ

ನವದೆಹಲಿ— ಜನತಾ ಬೀರೆ. ಧೋತ್ರಗಳ ತಯಾರಿಕೆಯು ಅಕ್ಟೋಬರು 2 ರಿಂದ ಕೈಮಗ್ಗ ವಿಭಾಗದಲ್ಲಿ ಪ್ರಾರಂಭಿಸಲಾಗುವುದು.

●

ದಿವ್ಯವಾಣಿ

ನುಡಿದ ಮಾತಿಲ್ಲ ಮುತ್ತಿನಂತಿರಬೇಕು, ಮಾಡುವ ಕೆಲಸವೆಲ್ಲ ಭಂಗಾರದಂತಿರಬೇಕು. — ಹಿಕನುಡಿ

"ಸತ್ಯವಾದಿ" ಪತ್ರಿಕೆ 60 ನೇ ವರ್ಷದತ್ತ

ಧರ್ಮಪ್ರಚಾರನಿರತ ಎಂ. ಎಸ್. ಸುಬ್ಬರಾವ್ ಅವರ ಸಂಪಾದಕತ್ವದಲ್ಲಿ ನಡೆಯುತ್ತಿರುವ ಮೈಸೂರಿನ "ಸತ್ಯವಾದಿ"ಗೆ 60 ವರ್ಷ ತುಂಬಿರುವ ವಿಷಯ ಸಂತಸದಾಯಕ ಅರಮನೆ ಶಿರಸ್ತೇದಾರ್ ಎಂ ವಿ ಸುಬ್ಬರಾವ್ ಸಂಸ್ಥಾಪಕರು 'ವಜ್ರ ಮಹೋತ್ಸವ' ವರ್ಷದಲ್ಲಿ ಕಾಲಿರಿಸಿರುವ ಈ ಪತ್ರಿಕೆ ನೂರಾರು ವರ್ಷ ಬಾಳಲಿ ಜನತೆಗೆ ಸೇವೆ ಸಲ್ಲಿಸಲಿ. ಶುಭಾಶಯಗಳು

ಬೆಂಗಳೂರಿನಿಂದ ಪ್ರಕಟವಾಗುವ ಫೆನ ಸಂಯುಕ್ತ ಭಾರತ ದಿನಪತ್ರಿಕೆಯಲ್ಲಿ ಮೇಲ್ಕಂಡಂತೆ ಪ್ರಕಟಿಸಿದೆ. ಶುಭಾಶಯ ಪ್ರಕಟಿಸಿ ಮಾಡಿದ್ದಕಾಗಿ ಆ ಪತ್ರಿಕೆಯ ಸಂಪಾದಕರು ಮತ್ತು ಸಹ ಸಂಪಾದಕರಾದ ಶೀ ರಂಗನಾಥ್‌ರಿಗೆ ಕೃತಜ್ಞತಾಪೂರ್ವಕ ವಂದನೆಗಳು.

ಮಾವೋರವರ ಶರೀರ

ಪೀಕಿಂಗ್ — ಮಾವೋರವರ ಶರೀರವು ಜನತಾ ಭಾರಿ ಸಭಾಂಗಣದಲ್ಲಿ ಒಂದು ಗಾಜಿನ ಕೇಸ್ ಇಡಲಾಗಿದೆ

★

40 ಮಂದಿಯ ಮರಣ

ನವದೆಹಲಿ — ಕರಾಚಿಯಲ್ಲಿ ಒಂದು ಗಂಟೆಯಲ್ಲಿ ಒಂದು ಕಟ್ಟಡ ಕುಸಿದು 40 ಜನ ಸತ್ತು ಹಲವಾರು ಮಂದಿ ಗಾಯಗೊಂಡಿರುವುದಾಗಿ ಪಾಕೀಸ್ತಾನ ರೇಡಿಯೋ ತಿಳಿಸಿದೆ.

★

ಬಾಳೆಹಣ್ಣು ಕೃತಜ್ಞತೆ

ವೇತನಕ್ಕಿಲ್ಲ — ಹತ್ತಿರದ ತೋಟದಲ್ಲಿ ಏಣಾರ ಬಾಳೆ ಹಣ್ಣುಗಳನ್ನು ಕದ್ದ ಆರೋಪದ ಮೇಲೆ ಇಬ್ಬರ ಬಂಧನವಾಗಿದೆ ಹಣ್ಣುಗಳನ್ನು ವಶಪಡಿಸಿಕೊಳ್ಳಲಾಗಿದೆ

ಷೇಕ್ ಮುಲೇಮಾನ್ ಬದುಕಿನ ಬಹುಸ್ಯ

ಇಸ್ರೇಲಿನ ಬೀರಷೇಬಾದಿಂದ ಬಂದ ವಾರ್ತೆ 39 ಪತ್ನಿಯರು ಹಾಗೂ 5 ನೂರು ಮಕ್ಕಳು ಮೊಮ್ಮಕ್ಕಳನ್ನು ಹೊಂದಿರುವ ಬೇಡಾಯಿನ್ ತನ್ನ ಪರ್ಫಾರ್ಮೆನ್ಸಿಗೆ ಮತ್ತು ವೈವಾಹಿಕ ಸೌಖ್ಯಕ್ಕೆ ಸುಟ್ಟ ಪಾರಿವಾಳ ಮತ್ತು ಅಧಿಕ ಒಂಟೆ ಹಾಲು ಸೇವನೆಯೇ ಕಾರಣವೆಂದು ಜೆರೊಯನ್ ನಾಯಕ ಷೇಕ್ ಮುಲೇಮಾನ್ ಎಲ್ ಹ್ಯಾಸೇನ್ ತಿಳಿಸಿದರು.

○

ಆಹಾರ ಮಂತ್ರಿಯವರ ಪ್ರಕಟಣೆ

ಬೆಂಗಳೂರು — ಅನೌಪಚಾರಿಕ ಪಡಿತರ ಭಾಗಗಳಲ್ಲಿಯ ಬಳಕೆದಾರರನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ಕಾರ್ಡು ಹಾಜರುಮಾಡದೆ ಹತ್ತು ಕೆಜಿ ಅಕ್ಕಿ ಮತ್ತು ಒಂದು ಕ್ವಿಂಟಾಲು ಗೋಧಿ ಪಡೆಯಬಹುದೆಂದು ಆಹಾರ ಮಂತ್ರಿಯವರಾದ ಶ್ರೀಮತಿ ಇವಾವಾಜ್ ಪತ್ರಿಕೆಯವರಿಗೆ ತಿಳಿಸಿದರು.

○

ದಸರಾ ಪಶುಪ್ರದರ್ಶನ ಆರಂಭದ ವೆಚ್ಚ

ಮೈಸೂರು — ದಸರಾ ಪಶುಪ್ರದರ್ಶನ ಆರಂಭ ಈ ವರ್ಷ ಹೆಚ್ಚು ದೊಡ್ಡದಾಗಿದ್ದರೂ ರೂ. 10 ಲಕ್ಷ ಖರ್ಚಿನದಾಗಿದೆ ಎಂದು ಪ್ರಧಾನ ಕಾರ್ಯದರ್ಶಿಗಳಾದ ಶ್ರೀಗಳಾದ ಡಿ ಜಯದೇವರಾಜ ಅರಸು ಮತ್ತು ಬಿ ಪಿ ಲಿಂಗಯ್ಯ ಅವರು ತಿಳಿಸಿದರು.

ಸಮಿತಿ ಅಧ್ಯಕ್ಷರಾದ ಶ್ರೀ ಎಫ್ ಕೆ ಇಂಜಿನಿಯರವರು ಮಾತನಾಡುತ್ತಾ, ದಸರಾ ಮಹೋತ್ಸವವನ್ನು ಉತ್ಸವ ಸಮಿತಿ ನಡೆಸುತ್ತಿದೆ ಎಂದು ತಿಳಿಸಿದರು.

ಗುಡಿಸಲು ನಿರ್ಮಾಣ

ಪ್ರಾಯೋಗಿಕ ಆಧಾರದ ಮೇಲೆ ಉತ್ತರ ಕನ್ನಡದ 11 ಬ್ಲಾಕ್‌ಗಳಲ್ಲಿ 21 20 ಗುಡಿಸಲುಗಳನ್ನು ನಿರ್ಮಿಸುವ ಕಾರ್ಯವನ್ನು ಕೈಗೊಳ್ಳಲಾಗುವುದು.

(2)

ಸಂತತಿಹರಣ ಚಿಕಿತ್ಸೆಗೆ ಮೇರವಣಿಗೆಯಲ್ಲಿ

ಬೀದರ್— ಸರಕಾರಿ ನೌಕರರಿಗೆ ಏರ್ಪಡಿಸಿದ್ದ ಸಂತತಿಹರಣ ಚಿಕಿತ್ಸೆ ಶಿಬಿರ ಜಿಲ್ಲಾಧಿಕಾರಿ ಶ್ರೀ ಕೆಲವಾಡಿಯವರ ನೇತೃತ್ವದಲ್ಲಿ, ಶಸ್ತ್ರ ಮತ್ತು ಭಿತ್ತಿಪತ್ರ ಹಿಡಿದಿದ್ದ ಸುಮಾರು ಸರಕಾರಿ ನೌಕರರು ಮೆರವಣಿಯಲ್ಲಿ ಹೋದರು.

ಂ

200 ವರ್ಷಗಳ ಹಿಂದಿನ ಚದುರಂಗದ ಮಣೆ

ಜಮ್ಮು— ಜಮ್ಮು ರಾಜಮನೆತನದವರು ಉಪಯೋಗಿಸುತ್ತಿದ್ದರೆನ್ನಲಾದ 200 ವರ್ಷಗಳ ಹಿಂದಿನ ಕಲಾತ್ಮಕ ಕಸೂತಿ ಕೆಲಸದಿಂದ ಕೂಡಿದ ರೇಷ್ಮೆ ಬಟ್ಟೆಯ ಚತುರಂಗದ ಮಣೆ ಇಲ್ಲಿಯ ಒಂದು ಮನೆಯಲ್ಲಿ ಪತ್ತೆಯಾಗಿದೆ.

★

Acknowledgement

We acknowledge with thanks the receipt of the copies of the Printed Annual Plans for 1976-77 of the D AP Projects of Chitradurga, Dharwar, Gulburga, Kolar, Belgaum and Bijapur (W B A) brought out by the Directorate of Drought Prone Areas Programme, Karnataka Government Secretariat.

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಆರ್ಪಿತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

Contribute Liberally to the National Defence Fund

Quality Printing Neat Binding

Lakshminarasimha Press

Sivarampet Mysore

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

ವುಡ್‌ಲಾಂಡ್ 10 9 76 ರಿಂದ

ಅಮೋಘ 2 ನೇ ವಾರ

ದ ನ ನಂ ಬ ರಿ

ಹಿಂದಿ

ಕಲರ್

ಮನೋಜ್ ಕುಮಾರ್ ಹೇಮಮಾಲಿನಿ

ಪ್ರೇಮನಾಥ್ ಪ್ರಾಣ್‌ಮುಂತಾದವರ ಅಭಿನಯ

ದಿನ 3 ಪ್ರದರ್ಶನಗಳು

ಅ ಪೆ ರಾ 10 9 76 ರಿಂದ

ಒಂದೇ ರೂಪ ಎರಡು ಗುಣ

ವಿಷ್ಣುವರ್ಧನ್ (ದ್ವಿಪಾತ್ರ) ಜಂದ್ರಕಲಾ ಅಭಿನಯ

ಕನ್ನಡ ಕಲರ್ ಪ್ರತಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore 4